# ಕರ್ನಾಟಕ ವಿಧಾನ ಪರಿಷತ್ತು

(10)

| | |
|---|---|
| ಸದಸ್ಯರ ಹೆಸರು | ಶ್ರೀ ಕೆ.ಟಿ ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1040 |
| ಉತ್ತರಿಸುವ ದಿನಾಂಕ | 19.12.2018 |
| ಉತ್ತರಿಸುವ ಮಂತ್ರಿಗಳು | ಕಾರ್ಮಿಕ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ | ರಾಜ್ಯದಲ್ಲಿ ಇತ್ತೀಚಿನ ಗಣತಿ ಪ್ರಕಾರ ಇರುವ ಬಾಲಕಾರ್ಮಿಕ ಸಂಖ್ಯೆ ಎಷ್ಟು ;(ಜಿಲ್ಲಾವಾರು ವಿವರ ನೀಡುವುದು) | 2016–17 ಮತ್ತು 2017–18ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕರ ಸಮೀಕ್ಷೆಯನ್ನು ಕೈಗೊಳ್ಳಲಾಗಿದ್ದು, ಸದರಿ ಸಮೀಕ್ಷೆಯಲ್ಲಿ ಒಟ್ಟು 22,882 ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕರು ಕಂಡುಬಂದಿದ್ದು, ಜಿಲ್ಲಾವಾರು ಸಮೀಕ್ಷಾ ಅಂಕಿಅಂಶಗಳ ಮಾಹಿತಿಯನ್ನು *ಅನುಬಂಧ–01* ರಲ್ಲಿ ಒದಗಿಸಲಾಗಿದೆ.<br>ಮೇಲ್ಕಂಡ ಅನುಭಂದ–01 ರಲ್ಲಿನ ಅಂಕಿ ಅಂಶಗಳ ಪರಿಶೀಲನೆ ಹಾಗೂ ದುಡಿಯುವ ಮಕ್ಕಳ ಗುರುತಿಸುವಿಕೆಗಾಗಿ, 2018–19ನೇ ಸಾಲಿನಲ್ಲಿ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಕಾರ್ಮಿಕ ಇಲಾಖೆ ಮತ್ತು ಇತರ ಭಾಗೀದಾರರುಗಳ ಜಂಟಿ ಸಹಭಾಗಿತ್ವದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ (OoSC)ನ್ನು ಗುರುತಿಸುವ ಸಮೀಕ್ಷೆಯೊಂದಿಗೆ ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕರು ಸಮೀಕ್ಷೆಯ ಕಾರ್ಯವು ಪ್ರಗತಿಯಲ್ಲಿದ್ದು, ಜಿಲ್ಲಾವಾರು ಸಮೀಕ್ಷೆಯ ಅಂಕಿಅಂಶಗಳ ಕ್ರೋಡಿಕರಣದ ಕಾರ್ಯವು ಬಾಕಿ ಇರುತ್ತದೆ. |
| ಆ | ರಾಜ್ಯದಲ್ಲಿ ಬಾಲಕಾರ್ಮಿಕ ಪದ್ಧತಿಯ ನಿರ್ಮೂಲನೆಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ರಾಜ್ಯದಲ್ಲಿ ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕ ಪದ್ಧತಿಯ ನಿರ್ಮೂಲನೆಗೆ ಸರ್ಕಾರವು ಪ್ರಮುಖವಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ;<br>1. ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳನ್ನು, ಬಾಲಕಾರ್ಮಿ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಪರಿಣಾಮಕಾರಿ ಅನುಷ್ಠಾನಕ್ಕಾ ಸ್ಥಾಪಿಸಲಾಗಿರುತ್ತದೆ.<br>2. ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಕಲಂ–16 ಹಾಗೂ ಕಲಂ-17ರಡಿಯಲ್ಲಿ ನಿರೀಕ್ಷಕರುಗಳನ್ನು ಅಧಿಸೂಚಿಸಿ ಅವರ ಮೂಲಕ ತಪಾಸಣೆ, ಬಿಡುಗಡೆ ಹಾಗೂ ಪುನರ್ವಸತಿಯ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>3. ಶಿಕ್ಷಣ, ಮಾಹಿತಿ ಹಾಗೂ ಸಂವಹನ(IEC) ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. |

4. ಸರ್ಕಾರದ ಆದೇಶ ಸಂಖ್ಯೆ: ಎಲ್‌ಡಿ 86 ಸಿಎಲ್‌ಸಿ 2012, ದಿನಾಂಕ: 20–10–2012 ರನ್ವಯ ಬಾಲ ಕಾರ್ಮಿ ಪದ್ಧತಿಯನ್ನು ಪರಿಣಾಮಕಾರಿಯಾಗಿ ನಿರ್ಮೂಲನೆ ಮಾಡುವ ಸಲುವಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿ, ಕಾರ್ಯಕಾರಿ ಸಮಿತಿಗಳನ್ನು ಹಾಗೂ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ ಅಧ್ಯಕ್ಷತೆಯಲ್ಲಿ ಬಾಲ ಕಾರ್ಮಿಕತೆ ನಿರ್ಮೂಲನೆ ಹಾಗೂ ಪುನರ್ವಸತಿ ಸಮಿತಿಗಳನ್ನು ರಚಿಸಿ ಅಧಿಸೂಚನ ಹೊರಡಿಸಲಾಗಿರುತ್ತದೆ.

5. ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕ ಮುಕ್ತ ಜಿಲ್ಲೆಗಳ ಘೋಷಣೆ ಹೊರಡಿಸಲು ಅವಶ್ಯವಿರು *"MEMORANDUM OF STANDARD OPERATING PROCEDURES (MSOPs)" FOR DISTRICT ADMINISTRATION TO DECLARAE A DISTRICT AS "CHILD AND ADOLOSCENT LABOUR FREE ZONE-CALFZ"* ಅನ್ನು ಸಿದ್ಧಪಡಿಸಿ, ಅನುಷ್ಠಾನದ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿರುತ್ತದೆ.

ಇ

ಬಾಲಕಾರ್ಮಿಕರನ್ನು ಇಟ್ಟುಕೊಂಡ ಮಾಲೀಕರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು;

ಕಳೆದ 5 ವರ್ಷಗಳಲ್ಲಿ ದಾಖಲಾದ ಪ್ರಕರಣಗಳೆಷ್ಟು? (ವಿವರ ನೀಡುವುದು)

ಬಾಲ ಕಾರ್ಮಿಕರನ್ನು ಕೆಲಸಕ್ಕೆ ಇಟ್ಟುಕೊಂಡ ಮಾಲೀಕರ ಮೇಲೆ ಬಾಲ್ಯವಸ್ಥೆ ಹಾಗೂ ಕಿಶೋರಾವಸ್ಥೆಯ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ) ಕಾಯ್ದೆ, 1986ರ ಪ್ರಾವಧಾನಗಳಡಿ ಹಾಗೂ ಅನ್ವಯವಾಗುವ ಇತರ ಕಾನೂನುಗಳಡಿಯಲ್ಲಿ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಸದರಿ ಕಾಯ್ದೆ/ನಿಯಮಾವಳಿಗಳಡಿಯಲ್ಲಿ ಪ್ರಮುಖವಾಗಿ ಬಾಲ ಕಾರ್ಮಿಕ/ಕಿಶೋ ಕಾರ್ಮಿಕರಾಗಿ ಮಕ್ಕಳನ್ನು ದುಡಿಸಿಕೊಳ್ಳುವ ಉದ್ಯೋಗದಾತರ ವಿರುದ್ಧ ಸಕ್ಷಮ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡು ಹಾಗೂ ಗೌರವಾನ್ವಿತ ಭಾರತದ ಸರ್ವೋಚ್ಚ ನ್ಯಾಯಾಲಯವು ಎಂ. ಸಿ. ಮೆಹ್ತಾ ವಿರುದ್ಧ ತಮಿಳನಾಡು ರಾಜ್ಯ ಮತ್ತಿತರರ ಪ್ರಕರಣದಲ್ಲಿ ನೀಡಿರುವ ತೀರ್ಪಿನನ್ವಯ ರೂ 20,000/– ಗಳ ಪರಿಹಾರ ಧನ ವಸೂಲಾತಿ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ) ಕಾಯ್ದೆ, 1986ರ ಪ್ರಾವಧಾನಗಳ ಉಲ್ಲಂಘನೆಗೆ ಸಂಬಂಧಿಸಿದಂತೆ, ಕಳೆದ ಐದು (5) ವರ್ಷಗಳಲ್ಲಿ ದಾಖಲಾಗಿರುವ ಪ್ರಕರಣಗಳ ವಿವರಗಳು ಈ ಕೆಳಗಿನಂತಿವೆ;

| ಕ್ರ ಸಂ | ವರ್ಷ | ಕೈಗೊಳ್ಳಲಾದ ತಪಾಸಣೆಗಳ ಸಂಖ್ಯೆ | ರಕ್ಷಿಸಲಾದ ಬಾಲ ಕಾರ್ಮಿಕರ ಸಂಖ್ಯೆ | ಗುರುತಿಸಲ್ಪಟ್ಟ ಉಲ್ಲಂಘನೆಗಳ ಸಂಖ್ಯೆ | ಹೂಡಲಾದ ಮೊಕದ್ದಮೆಗಳ ಸಂಖ್ಯೆ | ಶಿಕ್ಷಿಸಲ್ಪಟ್ಟ ಪ್ರಕರಣಗಳ ಸಂಖ್ಯೆ | ವಿಧಿಸಲಾದ ದಂಡದ ಮೊತ್ತ (ರೂ. ಗಳಲ್ಲಿ) |
|---|---|---|---|---|---|---|---|
| 1 | 2013 | 19,495 | 238 | 141 | 157 | 59 | 7,04,300 |
| 2 | 2014 | 27,990 | 183 | 119 | 126 | 38 | 4,85,850 |
| 3 | 2015 | 21,805 | 161 | 79 | 83 | 15 | 1,73,600 |
| 4 | 2016 | 19,407 | 113 | 79 | 83 | 30 | 1,64,000 |

| | | | | | | | | | |
|---|---|---|---|---|---|---|---|---|---|
| | | 5 | 2017 | 26,978 | 171 | 145 | 145 | 42 | 3,38,000 |
| | | 6 | 2018 (ನವಂಬರ್– 2018) | 16,829 | 120 | 98 | 77 | 17 | 2,05,500 |
| | | | ಒಟ್ಟು | 1,32,504 | 986 | 661 | 671 | 201 | 20,71,250 |

ಸಂಖ್ಯೆ: ಕಾಇ 140 ಸಿಎಲ್‌ಸಿ 2018

(ವೆಂಕಟರಮಣಪ್ಪ)
ಕಾರ್ಮಿಕ ಸಚಿವರು

ಗೌರವಾನ್ವಿತ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಟಿ ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ) ಇವರ ಪ್ರಶ್ನೆ ಸಂಖ್ಯೆ: 1040 ಕ್ಕೆ

ಅನುಬಂಧ-01

ಜಿಲ್ಲಾವಾರು ಬಾಲಕಾರ್ಮಿಕರ ಸಮೀಕ್ಷಾ ಅಂಕಿ ಅಂಶಗಳು-2016-17 ಹಾಗೂ 2017-18

| ಕ್ರ. ಸಂ | ಜಿಲ್ಲೆಯ ಹೆಸರು | ಒಟ್ಟು |
|---|---|---|
| 1. | ಬಾಗಲಕೋಟೆ | 1639 |
| 2. | ಬಳ್ಳಾರಿ | 1685 |
| 3. | ದಾವಣಗೆರೆ | 1490 |
| 4. | ಧಾರವಾಡ | 487 |
| 5. | ಕೊಪ್ಪಳ | 2421 |
| 6. | ಕೋಲಾರ | 233 |
| 7. | ಮಂಡ್ಯ | 349 |
| 8. | ಮೈಸೂರು | 35 |
| 9. | ರಾಯಚೂರು | 6035 |
| 10. | ತುಮಕೂರು | 471 |
| 11. | ಕಲಬುರಗಿ | 37 |
| 12. | ಶಿವಮೊಗ್ಗ | 12 |
| 13. | ಬೆಂಗಳೂರು ಗ್ರಾಮಾಂತರ | 85 |
| 14. | ವಿಜಯಪುರ | 12 |
| 15. | ಬೆಳಗಾವಿ | 879 |
| 16. | ಬೀದರ | 515 |
| 17. | ಚಾಮರಾಜ ನಗರ | 560 |
| 18. | ಚಿಕ್ಕಮಗಳೂರು | 24 |
| 19. | ಹಾಸನ | 0 |
| 20. | ದಕ್ಷಿಣ ಕನ್ನಡ(ಮಂಗಳೂರು) | 0 |
| 21. | ಉಡುಪಿ | 0 |
| 22. | ರಾಮನಗರ | 97 |
| 23. | ಯಾದಗಿರಿ | 2290 |
| 24. | ಚಿಕ್ಕಬಳ್ಳಾಪುರ | 04 |
| 25. | ಕೊಡಗು (ಮಡಿಕೇರಿ) | 02 |
| 26. | ಚಿತ್ರದುರ್ಗ | 176 |
| 27. | ಬೆಂಗಳೂರು ನಗರ | 3344 |
| 28. | ಉತ್ತರ ಕನ್ನಡ (ಕಾರವಾರ) | 0 |
| 29. | ಹಾವೇರಿ | ಸಮೀಕ್ಷೆ ಆಗಿರುವುದಿಲ್ಲ |
| 30. | ಗದಗ | ಸಮೀಕ್ಷೆ ಆಗಿರುವುದಿಲ್ಲ |
| | ಒಟ್ಟು | 22,882 |